

ವಧು ನೋಡುವ ಶಾಸ್ತ್ರದಲ್ಲಿ ಎದುರುಬದುರಾದ ಶಾರೂಖ್–ಕಾಜೋಲ್ ಹೆಸರಿನ ಮಂಗಗಳು





ಶಾರೂಖ್ ಹೆಸರಿನ ಮಂಗನನ್ನು ಮಾತನಾಡಿಸುತ್ತಿರುವ ಕೋತಿ ಆಡಿಸುವಾತ



ಕಾಜೋಲ್ ಸಮ್ಮತಿಯಿಂದ ಸಂತಸಗೊಂಡು ಲಾಗ ಹಾಕುತ್ತಿರುವ ಶಾರೂಖ್

ಮಾಡಿ ಕಾಜೋಲ್ ನಿಂತ ಜಾಗದಲ್ಲಿಯೇ ಮುಖ ತಿರುವಿದಳು. ಆಟ ನೋಡುತ್ತ ಸ್ಥಳದಲ್ಲಿ ನಿಂತಿದ್ದ ಜನ ಜೋರಾಗಿ ನಕ್ಕರು. ಕೋತಿ ಆಡಿಸುವಾತ ಮೊತ್ತೊಮ್ಮೆ ಕಾಜೋಲ್‌ಳಿಗೆ ಶಾರೂಖ್ ಬಗ್ಗೆ ವರ್ಣಿಸುತ್ತ, ‘ಅಗರ್ ತುಮೆ ಯೇ ಲಡ್ಕಾ ಪಸಂದ್ ನಹಿ ಆಯೇತೋ ಸೀದಾ ಸೀದಾ ಬೋಲ್ ದೋ. ತುಮ್ಹಾರಿ ನಾ ಕೆಹನೇ ಸೆ ಇಸ್ ಲಡ್ಕೆ ಕೋ ಕುಚ್ ಫರಕ್ ನಹೀ ಪಡೇಗಾ. ಶಾರುಖ್ ಕೋ ವಿವಾಹ್ ಕರನೇ ಕೇಲಿಯೇ ತುಜ್ಸೆ ಅಚ್ಛೆ ಲಡಕಿಯಾ ಕ್ಯೂ ಮೇ ಖಡೇ ಹೈ. ಏಕ್ ಬಾರ್ ಔರ್ ಸೋಚಲೋ’ ಎನ್ನುತ್ತ ಅವಳನ್ನು ಮದುವೆಗೆ ಒಪ್ಪಿಸಲು ಪ್ರಯತ್ನಿಸುತ್ತಿದ್ದ. ಆದರೆ ಕಾಜೋಲ್‌ಳ ಉತ್ತರ ಮಾತ್ರ ‘ಇಲ್ಲ’ ಎನ್ನುವುದೇ ಆಗಿತ್ತು.

ಆತನ ಎಲ್ಲ ಪ್ರಯತ್ನಗಳೂ ಸ್ಥಳದಲ್ಲಿದ್ದ ಜನರಿಗೆ ಕಚಗುಳಿ ಇಡುವಂತಿದ್ದವು. ಹೀಗೆ ಮೂರ್ನಾಲ್ಕು ಪ್ರಯತ್ನಗಳ ನಂತರ ಕೊನೆಗೂ ಕಾಜೋಲ್‌ಳಿಂದ ಹಸಿರು ನಿಶಾನೆ ದೊರಕಿತು. ಅದು ‘ಹೂಂ’ ಅನ್ನುವ ರೀತಿಯಲ್ಲಿ ಕತ್ತನ್ನು ಅಲ್ಲಾಡಿಸುತ್ತ ಶಾರೂಖ್‌ನನ್ನು ನೋಡುತ್ತ ನಿಂತುಬಿಟ್ಟಿತು. ಕಾಜೋಲ್ ಇಷ್ಟಪಟ್ಟಿದ್ದೇ ತಡ, ಶಾರೂಖ್ ಖುಷಿಗೊಂಡು ಮನಸೋ ಇಚ್ಛೆ ಲಾಗ ಹಾಕಲಾರಂಭಿಸಿದ. ನೆರೆದಿದ್ದ ಜನ ಶಿಳ್ಳೆ, ಕೇಕೆ, ಕರತಾಡನದ ಮೂಲಕ ಹರ್ಷ ವ್ಯಕ್ತಪಡಿಸಿದರು. ಆ ಖುಷಿಯಲ್ಲೇ ಧನಸಹಾಯ ನೀಡಿದರು. ಅಲ್ಲಿಗೆ ವಧು ನೋಡುವ ಶಾಸ್ತ್ರ ಮುಗಿದಿತ್ತು.

ನಿಧಾನಕ್ಕೆ ಗುಂಪು ಕರಗುತ್ತಾ ಬಂತು. ಕೋತಿ ಆಡಿಸುವಾತ ನೆಲದಲ್ಲಿ ಬಿದ್ದಿದ್ದ ಹಣವನ್ನೆಲ್ಲ ಆಯ್ದುಕೊಳ್ಳತೊಡಗಿದ. ಶಾರೂಖ್ ಮತ್ತು ಕಾಜೋಲ್ ಇಬ್ಬರೂ ಹಣ ಆಯ್ದುಕೊಳ್ಳಲು ಆತನಿಗೆ ಸಹಾಯ ಮಾಡಿದರು. ಬಳಿಕ ಎಲ್ಲ ಸಾಮಗ್ರಿಗಳನ್ನು ಗಂಟು ಕಟ್ಟಿಕೊಂಡು ಮತ್ತೊಂದೆಡೆ ಪ್ರದರ್ಶನ ನೀಡಲು ಹೊರಟ. ಕಾಜೋಲ್ ಆತನ ಹೆಗಲೇರಿ ಕುಳಿತಳು. ಶಾರೂಖ್ ಆತನ ಕೈಹಿಡಿದುಕೊಂಡು ನಡೆಯುತ್ತ ಸಾಗಿದ.

ಮೊದಲೆಲ್ಲ ಹಾವಾಡಿಸುವವರು, ಕರಡಿ ಆಡಿಸುವವರು, ಕೋತಿ ಆಡಿಸುವವರು ಜಾತ್ರೆ–ಉತ್ಸವ ಸೇರಿದಂತೆ ಹೆಚ್ಚು ಜನ ಸೇರುವ ಕಡೆಗಳಲ್ಲಿ ತಮ್ಮ ಪ್ರಾಣಿಗಳ ಮೂಲಕ ಪ್ರದರ್ಶನ ನೀಡಿ ನಾಲ್ಕು ಕಾಸು ಸಂಪಾದಿಸುತ್ತಿದ್ದರು. ಆದರೆ, ಇತ್ತೀಚೆಗೆ ಪ್ರಾಣಿಗಳನ್ನು ಬಳಸಿಕೊಂಡು ನೀಡುವ ಮನರಂಜನಾ ಪ್ರದರ್ಶನಗಳು ತೀರಾ ಅಪರೂಪ. ಹಾವು, ಕರಡಿ, ಕೋತಿ ಸೇರಿದಂತೆ ಕಾಡುಪ್ರಾಣಿಗಳನ್ನು ಪಳಗಿಸಿ ನಡೆಸುವ ಪ್ರದರ್ಶನಗಳನ್ನು ಪ್ರಾಣಿಗಳ ಮೇಲಿನ ಕ್ರೌರ್ಯ ತಡೆ ಕಾಯ್ದೆಯಡಿ ಸರ್ಕಾರ ನಿಷೇಧಿಸಿದೆ. ನಿರ್ಬಂಧದ ನಡುವೆಯೂ ಕೆಲವೆಡೆ ಇಂತಹ ಆಟಗಳ ಪ್ರದರ್ಶನಗಳು ನಡೆಯುತ್ತಿವೆ.

ಪ್ರತಿಕ್ರಿಯಿಸಿ: feedback@sudha.co.in